ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ____________

ಪತ್ರಿಕೆಯ ಹೆಸರು : NAME OF THE NEWS PAPER: ____________ ದಿನಾಂಕ : DATE : ____________

# ಧರ್ಮೇಗೌಡ ಆತ್ಮಹತ್ಯೆಗೆ ಶರಣಾಗಿದ್ದು ಜನಶತಾಬ್ದಿ ರೈಲಿಗಲ್ಲ?

## ಡಿಕ್ಕಿ ಹೊಡೆದ ರೈಲಿನ ಪತ್ತೆಗೆ ಪೊಲೀಸರ ಹರಸಾಹಸ

• **ಆರ್.ತಾರಾನಾಥ್**

**ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು



ವಿಧಾನ ಪರಿಷತ್ ಉಪಸಭಾಪತಿ ಎಸ್.ಎಲ್.ಧರ್ಮೇಗೌಡ ಅವರು ಡಿ.28ರಂದು ಹಳಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಟ್ರೈನ್ ಯಾವುದು?

ಈ ಪ್ರಶ್ನೆಗೆ ಉತ್ತರ ಕಂಡುಹಿಡಿಯುವುದು ರೈಲ್ವೆ ಪೊಲೀಸ್ (ಜಿಆರ್‌ಪಿ) ಇಲಾಖೆಗೆ ಈಗ ದೊಡ್ಡ ಸವಾಲಾಗಿದೆ. ಧರ್ಮೇಗೌಡ ಅವರು ಬೀರೂರಿನ ಹೇಮಂತ್ ಅವರಿಗೆ ಜನಶತಾಬ್ದಿ ಟ್ರೈನ್‌ನ ಸಮಯ ಕೇಳಿದ್ದರಿಂದ ಆ ಟ್ರೈನಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬುದು ಎಲ್ಲರ ಮುಂದಿರುವ ಮೇಲ್ನೋಟದ ಉತ್ತರ.

ಈ ಸಂಬಂಧ ಅಂದು ಜನಶತಾಬ್ದಿ ಟ್ರೈನ್ ಓಡಿಸುತ್ತಿದ್ದ ಲೋಕೋ ಪೈಲಟ್ (ಎಲ್‌ಪಿ) ಸಿದ್ದರಾಮಪ್ಪ ಅವರು ತನ್ನ ಇಲಾಖೆ ವರದಿಯ ಡೈರಿಯಲ್ಲಿ ಗುಣಸಾಗರ ಬಳಿ ಹಳಿಯ ಮೇಲೆ ಯಾರೋ ನಿಂತಿರುವಂತೆ ಕಂಡುಬಂದಿತ್ತೆಂದು ಉಲ್ಲೇಖಿಸಿದ್ದಾರೆ ಎಂದು ಸಹ ಹೇಳಲಾಗಿತ್ತು. ಇದು, ಕೂಡ ವಾಸ್ತವಿಕತೆಗೆ ದೂರವಾದುದು ಎಂದು ರೈಲ್ವೆ ಇಲಾಖೆ ಬಲ್ಲಮೂಲಗಳು 'ಕನ್ನಡಪ್ರಭ'ಕ್ಕೆ ತಿಳಿಸಿವೆ.

ಹುಬ್ಬಳ್ಳಿ- ಬೆಂಗಳೂರು ಜನಶತಾಬ್ದಿ ಟ್ರೈನ್ ಚಾಲಕರಲ್ಲಿ ಸಿದ್ದರಾಮಪ್ಪ ಹೆಸರಿನವರು ಇಲ್ಲ. ಡಿ.28ರಂದು ಜನಶತಾಬ್ದಿ ಟ್ರೈನ್ ಚಾಲನೆ ಮಾಡಿದ್ದು ಚಕ್ರವರ್ತಿ ಎಂಬುವವರು. ಟ್ರೈನ್‌ಗೆ ಯಾರೇ ಅಡ್ಡಲಾಗಿ ನಿಂತಿದ್ದರೆ ಚಾಲಕರು ಮುಂದಿನ ನಿಲ್ದಾಣದ ಸ್ಟೇಷನ್‌ಗೆ ವಾಕಿಟಾಕಿ ಮೂಲಕ ಮಾಹಿತಿ ನೀಡುತ್ತಾರೆ. ಆದರೆ, ಆ ಕೆಲಸ ಆಗಿಲ್ಲ. ಧರ್ಮೇಗೌಡ ಅವರು ಯಾವುದೋ ಗೂಡ್ಸ್ ಟ್ರೈನ್‌ಗೆ ಅಡ್ಡಲಾಗಿ ಮಲಗಿ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಹೆಚ್ಚಿದೆ ಎಂದು ರೈಲ್ವೆ ಇಲಾಖೆ ಅಂದಾಜು ಮಾಡಿದೆ.